ಶ್ರೀ ಜೆ.ಎ. ಶ್ರೀರಾಮರೆಡ್ಡಿ:- ನಮ್ಮ ಕೋಲಾರದ ಜನರಿಗೆ ಕೂಡ ಆ ಬಗ್ಗೆ ಆಶಯ ಇದೆ.

ಅಧ್ಯಕ್ಷರು:- ಕೋಲಾರಕ್ಕೆ ಆಕಾಶ ಇದೆ, ಭೂಮಿ ಇದೆ, ಆಕಾಶದಿಂದ ಮಳೆ ಬರಬೇಕು, ಭೂಮಿಯಲ್ಲಿ ಬೋರ್‌ವೆಲ್ ಕೊರೆಯಬೇಕು. ಭದ್ರ ಎಲ್ಲಿ, ಕೋಲಾರ ಎಲ್ಲಿ? ನೀವು ಎಲ್ಲೋ ಕನಸು ಕಾಣುತ್ತಿದ್ದೀರಿ. ಜನರನ್ನು ಭ್ರಮೆಯಲ್ಲಿಡಬೇಕು ಎಂದು ಇದ್ದರೆ ಇಂತಹ ಘೋಷಣೆಗಳನ್ನು ಮಾಡಬಹುದು. ಸತ್ಯ ಮಾತನಾಡುವುದಾದರೆ, ಆತ್ಮವಂಚನೆ ಇಲ್ಲದಂತೆ ಮಾತನಾಡುವುದಾದರೆ ಭದ್ರ ನೀರು ಕೋಲಾರಕ್ಕೆ ಬರತಕ್ಕಂಥದ್ದು ದುಸ್ಸಾಧ್ಯ. ನಿಮಗೆ ಕಾಮನ್ ಸೆನ್ಸ್ ಇಲ್ಲವೆ? Should we become Engineers, should we become technocrats for that?

ಶ್ರೀ ಜೆ.ಎ.ಶ್ರೀರಾಮರೆಡ್ಡಿ:- ಇದನ್ನು ಅವರೇ ಹೇಳಿರುವುದು. ಇದು ಅವರ ವರದಿಯಲ್ಲಿದೆ. ಅವರೇ ಆ ವರದಿಯನ್ನು ತರಿಸಿ ಹೇಳಲಿ. ಅದರಲ್ಲಿ ಕೋಲಾರ ಸೇರ್ಪಡೆಯಾಗಿದೆಯೋ ಇಲ್ಲವೋ ಎಂಬುದನ್ನು ಹೇಳಲಿ.

ಶ್ರೀ ಸಿ.ಆರ್. ಸಗೀರ್ ಅಹಮದ್:- ಮಾನ್ಯ ಭಾರಿ ನೀರಾವರಿ ಮಂತ್ರಿಗಳು ಹೇಳುತ್ತಾರೆ, ಭದ್ರ ಮೇಲ್ದಂಡೆ ಯೋಜನೆ ಪರಿವರ್ತನೆ ಮಾಡುತ್ತೇವೆ ಎಂದು ಹೇಳಿ ಅವರು ಮಾಡಿದಂತಹ ಅಂದಾಜು ವೆಚ್ಚಗಳನ್ನು ಹೇಳುತ್ತಾರೆ. ಈಗ ಅವರು ತಮ್ಮ ಬಾಯಿಂದಲೇ ಹೇಳುತ್ತಾರೆ, ಭದ್ರ ಮೇಲ್ದಂಡೆ ಯೋಜನೆಯಿಂದ ಜಮೀನು ಮುಳುಗಡೆಯಾಗುತ್ತಿದೆ ಅಂದರೆ ಚಿಕ್ಕಮಗಳೂರಿನ ಜನರು ಗಲಾಟೆ ಮಾಡುತ್ತಾರೆ ಎಂದು ಒಂದು ಕಡೆ ಅರಣ್ಯ ಬೆಳೆಯಬೇಕು, ಅರಣ್ಯವನ್ನು ಉಳಿಸಬೇಕು ಎಂದು ಹೇಳುತ್ತಿದ್ದಾರೆ. ಈ ಯೋಜನೆ ಆಗುವುದಕ್ಕೆ ಸಾಧ್ಯವಿಲ್ಲ ಎಂದು ಹೇಳಿದರೂ ಸಹ ಚಿತ್ರದುರ್ಗಕ್ಕೆ ನೀವು ಹೇಗೆ ನೀರನ್ನು ತೆಗೆದುಕೊಂಡು ಹೋಗುತ್ತೀರಿ ಎನ್ನುವುದರ ಬಗ್ಗೆ ಇವತ್ತಿನವರೆಗೂ ಸದನದಲ್ಲಿ ಪ್ರಶ್ನೆ ಹಾಕಿದ್ದರೂ ಸಹ ಇವತ್ತಿನವರೆಗೆ ಒಪ್ಪುವಂಥ ಮಾಹಿತಿ ಇಲ್ಲ.

ಅಧ್ಯಕ್ಷರು:- ತಾವು ಪ್ರಸ್ತಾಪ ಮಾಡುತ್ತಿದ್ದೀರಿ, ಆದರೆ ನಾನು ಈಗ ಅವರಿಗೆ ಉತ್ತರ ಈಬಗ್ಗೆ ಕೊಡುವುದಕ್ಕೆ ಅವಕಾಶ ಕೊಡುವುದಿಲ್ಲ. ಬೇರೆ ಅವಕಾಶ ನೋಡಿಕೊಂಡು ಸವಿಸ್ತಾರವಾಗಿ ಉತ್ತರಿಸುತ್ತೇನೆ. ಏಕೆಂದರೆ ಈಗ ಸಮಯ ಬಹಳ ಆಗುತ್ತಿದೆ. ಶೂನ್ಯ ವೇಳೆಯಲ್ಲಿ ಬೇರೆ ಸದಸ್ಯರು ನನ್ನ ಅನುಮತಿ ಕೇಳಿ ಕಾದಿದ್ದಾರೆ.

ಉ) ಡಿ: 7-1-94ರ ರಾತ್ರಿ ಕೊಂಕುಣಕುಪ್ಪ ಗ್ರಾಮದಲ್ಲಿ ದರೋಡೆ ನಡೆದಿರುವುದು.

ಶ್ರೀ ರಾಜಶೇಖರ ಸಿ. ಶೀಲವಂತ:- ಸನ್ಮಾನ್ಯ ಅಧ್ಯಕ್ಷರೆ, ನನ್ನ ಮತಕ್ಷೇತ್ರದ ವ್ಯಾಪ್ತಿಯ ಕೆಲವು ಪೋಲಿಸ್ ಸ್ಟೇಷನ್ ಸರಹದ್ದಿನಲ್ಲಿ ಬರತಕ್ಕಂಥ ಕೊಂಕಣಕೊಪ್ಪ ಎನ್ನತಕ್ಕ ಗ್ರಾಮದಲ್ಲಿ ದಿನಾಂಕ:7-1-94ರ ರಾತ್ರಿ ವೇಳೆಯಲ್ಲಿ ದುಷ್ಕರ್ಮಿಗಳು ಗುರುಪಾದಪ್ಪ ಹನುಮಪ್ಪ ಗುಡದಪ್ಪರ ಮನೆಯ ಕಿಟಕಿ ಒಡೆದು 85 ತೊಲ ಬಂಗಾರ ಹಾಗೂ ಸಾಕಷ್ಟು ಪ್ರಮಾಣ ಬೆಳ್ಳಿ ಮತ್ತು ಹಣವನ್ನು ಸಹ ದೋಚಿಕೊಂಡು ಹೋಗಿದ್ದಾರೆ. ಸಂಬಂಧಪಟ್ಟ ಪೋಲಿಸ್ ಠಾಣೆಗೆ ದಿನಾಂಕ: 7-1-94ರಂದು ದೂರನ್ನು ನೀಡಲಾಗಿದ್ದು, ವಿಚಾರಣೆ ಮಂದಗತಿಯಿಂದ ಸಾಗುತ್ತಿದೆ ಎಂದು ಆ ಸಂದರ್ಭದಲ್ಲಿ ಸಂಬಂಧಪಟ್ಟ ಮೇಲಿನ ಅಧಿಕಾರಿಗಳಿಗೆ ಈ ದಿಸೆಯಲ್ಲಿ ಕ್ರಮ ಜರುಗಿಸುವುದಕ್ಕೆ

ನಾವು ಹೋಗಿ ಸಾಕಷ್ಟು ಸಲ ಒತ್ತಾಯವನ್ನು ಮಾಡಿದ್ದಾಯಿತು. ಆದರೆ ಯಾವುದೋ ಒಂದು ಉದ್ದೇಶ ಇರಬಹುದೇನೋ ಗೊತ್ತಿಲ್ಲ. ಎಷ್ಟೋ ಸಲ ಕೇಳಿದರೂ ಸಹ ಆ ಇದನ್ನು ಗಣನೆಗೆ ತೆಗೆದುಕೊಳ್ಳದೇ ಇದ್ದುದಕ್ಕೆ ನಮಗೆ ಸಂಶಯ ಬಂದು ಪುನ: ನಾವು ಡೆಪ್ಯುಟಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್ ಅವರನ್ನು ಭೇಟಿ ಮಾಡಿದ್ದಾಯ್ತು. ಬಾಗಲಕೋಟೆಯ ಡಿವೈ ಎಸ್.ಪಿ ಅವರು ಯಾರು ಸಂಶಯಾಸ್ಪದ ವ್ಯಕ್ತಿಗಳಿದ್ದಾರೆ ಅವರನ್ನು ಕರೆಸಿ ವಿಚಾರಣೆ ಮಾಡಲಾಗಿ ಅವರು ಮೌಖಿಕವಾಗಿ ತಾವು ಮಾಡಿದ್ದನ್ನು ಒಪ್ಪಿಕೊಂಡರು. ಆದರೆ ಆ ವೇಳೆಯಲ್ಲಿ ಲೋಕಸಭೆ ಚುನಾವಣೆ ನಡೆಯುತ್ತಿದ್ದುದರಿಂದ ಕೆಲವು ರಾಜಕಾರಣಿಗಳ ಒತ್ತಾಯದಿಂದ ಆ ಸಂಶಯಾಸ್ಪದ ವ್ಯಕ್ತಿಗಳನ್ನು ಹೊರಗಡೆ ಹೊರಗಡೆ ಬಿಡಲಾಯಿತು. ನಂತರ ಸಾಕಷ್ಟು ಸಲ ಬಿಜಾಪುರ ಎಸ್.ಪಿ. ಯವರ ಗಮನಕ್ಕೆ ತಂದು ಅವರೆದುರಿಗೆ ಈ ವಿಷಯವನ್ನು ತೆಗೆದುಕೊಂಡಾಗ ಅವರೂ ಸಹ ಬೇಜವಾಬ್ದಾರಿಯಿಂದ ಉತ್ತರವನ್ನು ಕೊಟ್ಟು ನಮಗೆ ಯಾವ ರೀತಿಯಿಂದಲೂ ರಕ್ಷಣೆ ಕೊಡಲಿಲ್ಲ. ಅದೇರೀತಿ ಬೆಳಗಾಂ ಡಿ. ಐ. ಜಿ. ಯವರಿಗೂ ವಿಷಯವನ್ನು ತಿಳಿಸಲಾಯಿತು. ಅವರೂ ಸಹ ಕ್ರಮ ತೆಗೆದುಕೊಳ್ಳಲಿಲ್ಲ. ನಂತರ 5.1.96ರಂದು ಮಾನ್ಯ ಗೃಹ ಸಚಿವರಿಗೆ ನಾನು ಒಂದು ಪತ್ರವನ್ನು ಬರೆದೆ. ಅದಕ್ಕೂ ಸಹ ಅವರು ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳಲಿಲ್ಲ. ಆ ಭಾಗದಲ್ಲಿ ಜನತೆಗೆ ಒಂದೊಂದು ರೀತಿಯ ವಿಚಿತ್ರ ಸನ್ನಿವೇಶ ಕಂಡುಬರುತ್ತಿದೆ. ಇನ್ನು ಮುಂದೆ ನಮ್ಮ ಮನೆಗಳಲ್ಲಿ ಈ ರೀತಿಯಾದರೆ ಗತಿ ಏನು ಎನ್ನತಕ್ಕಂಥ ಭಾವನೆ ಆ ಭಾಗದ ಜನರಿಗೆ ಬರುವುದರಿಂದ ಮಾನ್ಯ ಸಚಿವರು ದಯವಿಟ್ಟು ಇದೊಂದು ಕೇಸನ್ನು ಸಿ.ಓ.ಡಿ ತನಿಖೆಗೆ ಒಳಪಡಿಸ ತಪ್ಪಿತಸ್ಥರು ಯಾರು ಎಂದು ಕಂಡುಹಿಡಿದು ಬೇಗನೆ ಅವರ ಬಂಗಾರವನ್ನು ಕೊಡಿಸುವಂತಹ ವ್ಯವಸ್ಥೆ ಆಗುವಂತೆ ಮಾಡಬೇಕು. ಯಾರು ಅಧಿಕಾರಿಗಳು ಇದಕ್ಕೆ ಲೋಪದೋಷಗಳನ್ನು ಎಸಗಿದ್ದಾರೋ ಅವರ ಮೇಲೆ ಕ್ರಮವನ್ನು ಸಹ ತೆಗೆದುಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ನಮ್ರತೆಯಿಂದ ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು:-ಯನ್ನು ಸರ್ಕಾರ ಅರ್ಥ ಮಾಡಿಕೊಂಡಿದೆ. ಕಳೆದ ಸುಮಾರು ಒಂದೂವರೆ ವರ್ಷಗಳಿಂದ ಒಂದು ತನಿಖೆ ಮಂದಗತಿಯಿಂದ ನಡೆಯುತ್ತಿದ್ದು, ಇದರ ಬಗ್ಗೆ ಕ್ರಮವನ್ನೇ ತೆಗೆದುಕೊಂಡಿಲ್ಲ ಎನ್ನತಕ್ಕ ವಿಚಾರವನ್ನು ಹೇಳಿದ್ದಾರೆ. ಗೃಹಸಚಿವರಿಗೆ ಕೂಡ ಪತ್ರವನ್ನು ಬರೆದಿರುವುದಾಗಿ ಹೇಳಿದ್ದಾರೆ. ಗೃಹಸಚಿವರು ಆ ಪತ್ರವನ್ನು ಈಗಗಲೇ ಡಿ.ಐ.ಜಿ.ಗೆ ಕಳುಹಿಸಿದ್ದಾರೆಂದು ವರದಿ ಇದೆ. ಡಿ.ಐ.ಜಿ. ಅವರ ಜೊತೆ ಒಂದು ಸಲ ಸಂಪರ್ಕ ಮಾಡಿ ಅವರ ವಿಚಾರಣೆ ಯಾವುದಿದೆ ಅದನ್ನು

ಅಧ್ಯಕ್ಷರು:- ಅವರು ಏನು ಹೇಳುತ್ತಾರೆ ಎಂದರೆ ಸಸ್ಪೆಕ್ಟ್ ಯಾರಿದ್ದಾರೆ ಅವರನ್ನು ತನಿಖೆ ಮಾಡಿ ಆಮೇಲೆ ಪೊಲೆಟಿಕಲ್ ಬ್ಯಾಕ್‌ಗ್ರೌಂಡ್ ಮೇಲೆ ಬಿಟ್ಟು ಕಳುಹಿಸಿದ್ದಾರೆ. ಇದರಿಂದಾಗಿ ಜನರಲ್ಲಿ ಬಹಳ ಕೆಟ್ಟ ಅಭಿಪ್ರಾಯ ಬರುತ್ತಿದೆ. ಇಷ್ಟು ದೊಡ್ಡ ಪ್ರಮಾಣದಲ್ಲಿ ಕಳ್ಳತನವಾಗಿರುವಾಗ ಅವರು ಡಿ.ಸಿ.ಪಿ. ನೋಡಿದ್ದಾರೆ, ಎಸ್.ಪಿ. ನೋಡಿದ್ದಾರೆ. ಡಿ.ಐ.ಜಿ. ನೋಡಿದ್ದಾರೆ ಮತ್ತು ಈ ಬಗ್ಗೆ ಒಂದು ಖಚಿತವಾದ ವಿಚಾರಣೆ ಮಾಡಿ ಎಂದು ಹೇಳುತ್ತಾರೆ.

ಶ್ರೀ ಎಂ.ಸಿ. ನಾಣಯ್ಯ:- ಇದರ ಬಗ್ಗೆ ನಾನು ಏನು ಹೇಳುತ್ತಿದ್ದೇನೆಂದರೆ ಈಗ ಮಂತ್ರಿಗಳಿಗೆ ಪತ್ರವನ್ನು ಬರೆದಿರತಕ್ಕದ್ದರ ಮೇಲೆ ಬಹುಶ: ಅವರು ಕ್ರಮ ಕೈಗೊಂಡಿರುತ್ತಾರೆ. ಡಿ.ಐ.ಜಿ.ಅವರನ್ನು ಸಂಪರ್ಕ ಮಾಡಿ ಇದರ ಬಗ್ಗೆ ಒಂದು ತನಿಖೆಯನ್ನು ಮುಂದುವರೆ ಸತಕ್ಕಂಥಾದ್ದು ಮತ್ತು ತಪ್ಪಿತಸ್ಥರು ಯಾರಿದ್ದಾರೆ ಅವರ ಮೇಲೆ ಕ್ರಮ ಕೈಗೊಳ್ಳುವುದಕ್ಕೆ ಸರ್ಕಾರ ಹಿಂದು ಮುಂದೆ ನೋಡುವುದಿಲ್ಲ.

ಊ) ದಕ್ಷಿಣ ಕನ್ನಡ ಜಿಲ್ಲೆಯ ಮಾರ್ತೇದಾರರ ಸಂಘದಿಂದ ಕೊಡಬೇಕಾದ ಹಣವನ್ನು ಮನ್ನ ಮಾಡುವುದು

ಶ್ರೀ ವಸಂತ್ ಏ. ಸಾಲಿಯಾನ:- ಸನ್ಮಾನ್ಯ ಅಧ್ಯಕ್ಷರೆ, ನಮ್ಮ ದಕ್ಷಿಣ ಕನ್ನಡ ಜಿಲ್ಲೆ 12 ಸಾವಿರ ಮೂರ್ತೇದಾರರು ಇರತಕ್ಕಂಥ ಒಂದು ಜಿಲ್ಲೆ. 1992ನೇ ಇಸವಿಯಲ್ಲಿ ಆಗಿನ ಮಾನ್ಯ ಮಂತ್ರಿಗಳಾದ ಮಾನ್ಯ ಬಂಗಾರಪ್ಪನವರು ಸಹಕಾರ ಸಂಘಗಳ ಮುಖೇನ ಮೂರ್ತೇದಾರರು ಮಾರಾಟ ಮಾಡಬೇಕೆಂದು ಆಜ್ಞೆ ಮಾಡಿದ್ದರು. ಮುಖ್ಯ ಮಂತ್ರಿಗಳು ಆಜ್ಞೆ ಮಾಡಿ ಆದ ಮೇಲೆ ಈ ಸಹಕಾರ ಸಂಘಗಳ ರಚನೆ ಮಾಡಲಿಕ್ಕೆ ಸುಮಾರು 2 ವರ್ಷ ಹಿಡಿಯಿತು. ಆ ಸಂದರ್ಭದಲ್ಲಿ ಸರ್ಕಾರ ಒಂದು ರೂಪಾಯಿ ಫೀಯನ್ನು ಸಹಕಾರ ಸಂಘಗಳಿಗೆ ಮೂರ್ತೇದಾರರು ಕೊಡಬೇಕೆಂದು ಆದೇಶ ಮಾಡಿತು. ತರುವಾಯ 1994ನೇ ಇಸವಿಯಲ್ಲಿ ಆಗಿನ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪಮೊಯ್ಲಿ ಅವರು ಒಂದು ರೂಪಾಯಿ ಫೀಯನ್ನು ಮನ್ನಾ ಮಾಡಿದರು. ಮನ್ನಾ ಮಾಡಿದ ಬಳಿಕ ಮೂರ್ತೇದಾರರಿಂದ ಒಂದು ರೂಪಾಯಿ ಕೂಡ ಬರಲಿಲ್ಲ. ಹೀಗಾಗಿ ಇಲಾಖೆಯವರು ಮತ್ತು ಸರ್ಕಾರದವರು ನಲವತ್ತೊಂದು ಲಕ್ಷದ ತೊಂಭತ್ತೆರಡು ಸಾವಿರ ರೂಪಾಯಿ ಹಣವನ್ನು ಮೂರ್ತೇದಾರರ ಸಹಕಾರ ಸಂಘದ ಮೂಲಕ ಕೊಡಬೇಕೆನ್ನುವ ರೀತಿಯಲ್ಲಿ ಕಿರುಕುಳ ಕೊಡುತ್ತಿದ್ದಾರೆ. ಸರ್ಕಾರ ದಯವಿಟ್ಟು ಇದನ್ನು ಪರಿಶೀಲಿಸಿ ಈ ಹಣವನ್ನು ಮೂರ್ತೇದಾರರ ಪರವಾಗಿ ಮನ್ನಾ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಸಿ. ನಾಣಯ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು:- ಈ ಒಂದು ವಿಚಾರ ಈ ಸದನದಲ್ಲಿ ಚರ್ಚೆಯಾಗಿದೆ. ಸರ್ಕಾರ ಒಪ್ಪಿ ಬಹುಶ: ಅದನ್ನು ಮನ್ನಾ ಮಾಡಬೇಕೆಂದು ಹೇಳುತ್ತಿದ್ದಾರೆ. ಆದರೆ ಮೂರ್ತೇದಾರರು ಯಾರೂ ಫೀಸನ್ನು ಕಟ್ಟಿಲಿಲ್ಲ. ಮತ್ತು ಸರ್ಕಾರ ಕೂಡ ವಸೂಲು ಮಾಡುವುದಕ್ಕೆ ಹೋಗಲಿಲ್ಲ. ಈ ಬಗ್ಗೆ ಅಧಿಕೃತವಾಗಿ ಆಜ್ಞೆ ಮಾಡಬೇಕೆಂದು ಕೇಳುತ್ತಿದ್ದಾರೆ. ಈ ಬಗ್ಗೆ ಮಾನ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ಋ) ಹಾಸನ ಜಿಲ್ಲಾಧಿಕಾರಿಗಳು Apmc ಚುನಾವಣೆ ಪ್ರಕಟಿಸಿರುವುದು.

ಶ್ರೀ ಬಿ. ಶಿವರಾಂ(ಗಂಡಸಿ):-ಮಾನ್ಯ ಅಧ್ಯಕ್ಷರೆ, ಈಗ ಹಾಸನದ ಜಿಲ್ಲಾಧಿಕಾರಿಗಳು ಎ.ಪಿ. ಎಂ.ಸಿ. ಚುನಾವಣೆ 17ನೇ ತಾರೀಖು ನಡೆಯುತ್ತದೆ ಎಂದು ವೇಳಾಪಟ್ಟಿಯನ್ನು ಪ್ರಕಟ ಮಾಡಿದ್ದಾರೆ. ಈ ಸಂದರ್ಭದಲ್ಲಿ ಸರ್ಕಾರದ ಕಾರ್ಯಕ್ರಮಗಳ ಉದ್ಘಾಟನೆಯನ್ನು ಸಚಿವರು ಮಾಡಬಹುದೇ ಎನ್ನತಕ್ಕದ್ದು ಒಂದು ವಿಚಾರ.